**ಸಾಕ್ಷಿಯನ್ನು ದಿನಾಂಕಃ 03.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಭಾರತ ದಂಡ ಪ್ರಕ್ರಿಯೆ ಸಂಹಿತೆ ಕಲಂ 200 ಸಹವಾಚಕ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 223 ರಡಿಯಲ್ಲಿ ಪಿರ್ಯಾದುದಾರನ ಮುಂದುವರೆದ ಪ್ರಮಾಣ ಪೂರ್ವ ಹೇಳಿಕೆಃ ಪಿರ್ಯಾದಿ ಪರ ಶ್ರೀ. ಸ್ವಾಮಿ / ಶ್ರೀ. ಬಿ.ಹೆಚ್.ಆರ್. ವಕೀಲರಿಂದಃ**

ನಾನು ದಿನಾಂಕಃ 09.03.2023 ರಂದು ಡಿ.ವೈ.ಎಸ್.ಪಿ. ಹುಣಸೂರು ಉಪ-ವಿಭಾಗ, ಇವರಿಗೆ ನೀಡಿದ ದೂರಿನ ಸಂಬಂಧ ಅವರು ನೀಡಿದ ಸ್ವೀಕೃತಿಯ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.-2** ಎಂದು, ಆರೋಪಿ ನನಗೆ ಅವಹೇಳನವಾಗಿ ಬೈದ ಬಗ್ಗೆ ಆಡಿಯೋ ಕ್ಲಿಪಿಂಗ್ ಅನ್ನು ಸಿ.ಡಿ. ಗೆ ಹಾಕಿಸಿದ್ದು ಆ ಬಗ್ಗೆ ಸಿ.ಡಿ. ಯನ್ನು ಹಾಗು ಅದಕ್ಕೆ ಸಂಬಂಧಿಸಿದಂತೆ ಭಾರತ ಸಾಕ್ಷ್ಯ ಅಧಿನಿಯಮ 65 ಬಿ ರಡಿಯಲ್ಲಿನ ಸರ್ಟಿಫಿಕೇಟ್ ಅನ್ನು ಹಾಜರುಪಡಿಸಿದ್ದು, ಸದರಿ ಸಿ.ಡಿ. ಯನ್ನು **ನಿ.ಪಿ.-3** ಎಂದು ಹಾಗು 65 ಬಿ ರಡಿಯಲ್ಲಿನ ಸರ್ಟಿಫಿಕೇಟ್ ಅನ್ನು **ನಿ.ಪಿ.-4** ಎಂದು ಗುರುತಿಸಲಾಯಿತು.

ಮೇಲೆ ಹೇಳಿದ ನನ್ನ ಹೇಳಿಕೆ ಸಾಕ್ಷ್ಯ ಹಾಗು ದಾಖಲೆಗಳನ್ನು ಪರಿಶೀಲಿಸಿ ಆರೋಪಿಗೆ ಸೂಕ್ತ ಶಿಕ್ಷೆ ವಿಧಿಸಬೇಕೆಂದು ಕೋರಿಕೊಳ್ಳುತ್ತೇನೆ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**